<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ.**88/2019**</u>

ಚಾಸಾ-12 ಫ್ರಾಸಾ-04

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ:20.05.2025

| | | |
|---|---|---|
| ಹೆಸರು | : | ಮೋದಿನಸಾಬ |
| ತಂದೆಯ ಹೆಸರು | : | ಮಹೆಬೂಬಸಾಬ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಗ್ರಾಮ ಲೆಕ್ಕಾಧಿಕಾರಿ |
| ವಾಸಸ್ಥಳ | : | ತಹಸೀಲ್ ಕಾರ್ಯಾಲಯ ಅಫಜಲಪೂರ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

2010 ರಿಂದ 2018 ರ ವರೆಗೆ ಮಣ್ಣೂರ ಗ್ರಾಮದ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ25.07.2018 ರಂದು ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಮಾನ್ಯ ಸಹಾಯಕ ಆಯುಕ್ತರು ಕಲಬುರಗಿ, ಮಾನ್ಯ ತಹಸೀಲ್ದಾರ ಅಫಜಲಪೂರ, ಉಪ-ತಹಸೀಲ್ದಾರ ನಾಡ ಕಾರ್ಯಾಲಯ ಕರಜಗಿ ಮತ್ತು ಗಣಿ ಮತ್ತು ಭೂ-ವಿಜ್ಞಾನ ಇಲಾಖೆಯವರು ಮತ್ತು ಲೋಕೋಪಯೋಗಿ ಇಲಾಖೆಯ ಸಿಬ್ಬಂದಿ, ಕಂದಾಯ ನೀರಿಕ್ಷಕರು ಕರಜಗಿ ಇವರು ಜಂಟಿಯಾಗಿ ಮಣ್ಣೂರ ಗ್ರಾಮದ ಸಾರ್ವಜನಿಕ ಸ್ಥಳಕ್ಕೆ ಭೇಟಿ ನೀಡಿ, ತದ ನಂತರ ಮಣ್ಣೂರ ಗ್ರಾಮದ ಸರ್ವೆ ನಂ.26/7 ರಲ್ಲಿ ಅಕ್ರಮವಾಗಿ ಸಂಗ್ರಹಿಸಿ ಇಟ್ಟಿದ್ದ ಮರಳಿನ ಕುರಿತು ಪರೀಶಿಲನೆ ಮಾಡಲು ಸ್ಥಳಕ್ಕೆ ಭೇಟಿ ನೀಡಿದ್ದು, ಸದರಿ ಸರ್ವೆ ನಂಬರಿನ 160 ಮೆಟ್ರಿಕ್ ಟನ್ ನಷ್ಟು ಮರಳು ಸಂಗ್ರಹ ಮಾಡಿ ಇಟ್ಟಿರುವುದು ಕಂಡು ಬಂದಿರುತ್ತದೆ ತದ ನಂತರ ಸದರಿ ಮರಳನ್ನು ಜಪ್ತಿ ಪಡಿಸಿಕೊಂಡು ಲೋಕೋಪಯೋಗಿ ಇಲಾಖೆಯ ಅಫಜಲಪೂರ ರವರ ಸುಪ್ರದ್ಧಿಗೆ

ನೀಡಿರುತ್ತಾರೆ. ತದ ನಂತರ ಪಂಚನಾಮೆಯನ್ನು ಮಾಡಿರುತ್ತಾರೆ. ತದ ನಂತರ ಸ್ಥಳದಲ್ಲಿ ಇದ್ದ ಒಂದು ಟ್ರ್ಯಾಕ್ಟರನ್ನು ಜಪ್ತಿ ಪಡಿಸಿಕೊಂಡು ಪೋಲಿಸರ ಸುಪ್ರದ್ಧಿಗೆ ನೀಡಿರುತ್ತಾರೆ. ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು ಎಂದು ಹೇಳುವ ಟ್ರ್ಯಾಕ್ಟರ ಭಾವಚಿತ್ರವನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-**4** ರಿಂದ ನಿಪಿ-**7** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ನಂ.**1** ರಿಂದ **3** ಪರ ಶ್ರೀ **SJG** ವಕೀಲರಿಂದಃ-</u>

ದಿಃ25.07.2018 ರಂದು ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಮಾನ್ಯ ಸಹಾಯಕ ಆಯುಕ್ತರು ಕಲಬುರಗಿ, ಮಾನ್ಯ ತಹಸೀಲ್ದಾರ ಅಫಜಲಪೂರ, ಉಪ-ತಹಸೀಲ್ದಾರ ನಾಡ ಕಾರ್ಯಾಲಯ ಕರಜಗಿ ಮತ್ತು ಗಣಿ ಮತ್ತು ಭೂ-ವಿಜ್ಞಾನ ಇಲಾಖೆಯವರು ಮತ್ತು ಲೋಕೋಪಯೋಗಿ ಇಲಾಖೆಯ ಸಿಬ್ಬಂದಿ, ಕಂದಾಯ ನೀರಿಕ್ಷಕರು ಕರಜಗಿ ಇವರು ಜಂಟಿಯಾಗಿ ಮಣ್ಣುರ ಗ್ರಾಮದ ಸಾರ್ವಜನಿಕ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗ್ರಾಮದ ಸರ್ವೆ ನಂ.26/7 ರಲ್ಲಿ ಅಕ್ರಮವಾಗಿ ಸಂಗ್ರಹಿಸಿ ಇಟ್ಟಿದ್ದ ಮರಳಿನ ಕುರಿತು ಪರೀಶಿಲನೆ ಮಾಡಲು ಸ್ಥಳಕ್ಕೆ ಭೇಟಿ ನೀಡಿದ್ದು, ಸದರಿ ಸರ್ವೆ ನಂಬರಿನ 160 ಮೆಟ್ರಿಕ್ ಟನ್ ನಷ್ಟು ಮರಳು ಸಂಗ್ರಹ ಮಾಡಿ ಇಟ್ಟಿರುವುದು ಕಂಡು ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನೆ ಸ್ಥಳದಲ್ಲಿ ಇದ್ದ ಒಂದು ಟ್ರ್ಯಾಕ್ಟರನ್ನು ಜಪ್ತಿ ಪಡಿಸಿಕೊಂಡು ಪೋಲಿಸರ ಸುಪ್ರದ್ಧಿಗೆ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುನ್ನೆ ಸ್ಥಳದಲ್ಲಿ ಇರಲಿಲ್ಲ, ನಾನು ಯಾವುದೇ ಘಟನೆಯನ್ನು ನೋಡಿಲ್ಲಾ ಎಂದು ಸೂಚಿಸುವುದು ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ನಂ.**4** ಪರ ಶ್ರೀ **SSP** ವಕೀಲರಿಂದಃ-</u>

ಅಧಿಕಾರಿಗಳು ಜಂಟಿ ಕಾರ್ಯಾಚರಣೆಗೆ ಬಂದಾಗ ಸಮಯ 07 ರಿಂದ 07.30 ಗಂಟೆ ಆಗಿತ್ತು. ಸರ್ವೆ ನಂ.26/7 ಜಮೀನು ಮಣ್ಣೂರ ಗ್ರಾಮದ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲಾ. ಸಂಗ್ರಹಿಸಿ ಇಟ್ಟ ಮರಳಿನ ಚೆಕ್ ಬಂದಿ ನನಗೆ ಹೇಳಲು

ಬರುವುದಿಲ್ಲ. ಸಂಗ್ರಹಿಸಿ ಇಟ್ಟ ಮರಳಿನ ಜಪ್ತಿ ಪಂಚನಾಮೆ ಮಾಡುವಾಗ ಫೋಟೋ ತೆಗೆದಿರುತ್ತಾರೆ. ಸದರಿ ಸರ್ವೆ ನಂಬರಿನ ಜಮೀನಿನಲ್ಲಿ ಯಾವುದೇ ಬೆಳೆ ಇರಲಿಲ್ಲ. ಸರ್ವೆ ನಂ.26/7, 2017-18 ನೇ ಸಾಲಿನ ಪಹಣಿ ಪತ್ರಿಕೆಯಲ್ಲಿ ಕ್ರಮ ಸಂಖ್ಯೆ.12 ರಲ್ಲಿ ಬೆಳೆಯ ಹೆಸರು ತೊಂಡೆಕಾಯಿ ಅಂತಾ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಈ ಪ್ರದೇಶದಲ್ಲಿ ತೊಂಡೆಕಾಯಿ ಬೆಳೆಯುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-4 ರಿಂದ 7 ರಲ್ಲಿ ತೋರಿಸಿದ ಭಾವಚಿತ್ರಗಳು ಪೋಲಿಸ ಠಾಣಾ ಆವರಣದಲ್ಲಿ ತೆಗೆಯಲಾಗಿದೆ ಎಂದರೆ ಸರಿ. ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ